ಯಮಯಾತನೆಯನ್ನು ಸಹಿಸಲಾಗದೆ ಚರ್ಚಿಲ್ ಅನ್ನು ಬಟ್ಟೆಸೋಪು, ಮೈಸೋಪು ಶಾಂಪು ಎಲ್ಲವನ್ನೂ ಹಾಕಿ ತಿಕ್ಕಿತಿಕ್ಕಿ ತೊಳೆದದ್ದಾಯ್ತು. ಆದರೂ ಆ ವಾಸನೆ ತಿಂಗಳುಗಟ್ಟಲೆ ಅಲ್ಲಿ ಇಲ್ಲಿ ಹೊಡೆಯುತ್ತಲೇ ಇತ್ತು.

ನಡುಮನೆಯಲ್ಲಿ ಗೋಡೆಗೆ ಒತ್ತರಿಸಿ ಒಂದು ದಿವಾನ್ ಇತ್ತು. ಸಾಮಾನ್ಯವಾಗಿ ಚರ್ಚಿಲ್ ಮಲಗುತ್ತಿದ್ದ ಜಾಗ ಈ ದಿವಾನ್ ಕೆಳಗೆ. ಮೂತಿಯನ್ನು ನೆಲಕ್ಕಾನಿಸಿ, ದೇಹವನ್ನು ರೆಕ್ಕೆಯಂತೆ ಅಗಲಿಸಿ ಹರಡಿ, ಬಾಲವನ್ನು ನೀಳಕ್ಕೆ ಹಿಂದೆ ಇಳಿಬಿಟ್ಟು ಸುಖಾಸನದಲ್ಲಿ ಮಲಗಿದ್ದ. ಅವನ ಕುತ್ತಿಗೆಗೆ ಕೈ ಹಾಕುತ್ತಲೂ ದೇಹವನ್ನು ಒಂದು ಕಡೆಗೆ ವಾಲಿಸಿಕೊಂಡು ಬಾಲ ಕುಣಿಸುತ್ತ ಕೈಯನ್ನು ಮುಂಚಾಚಿದ. ಮುಂಗೈ ಹಿಡಿದು ಅವನನ್ನೆಳೆದು ಹೊರ ತೆಗೆಯುವಾಗ ದಿವಾನದ ಬಟ್ಟೆಯ ಮೇಲೆ ಏನೋ ಹರಿದಂತಾಯ್ತು. ಚರ್ಚಿಲ್ ತಲೆಯನ್ನ ಹಾಗೆ ನನ್ನ ತೊಡೆ ಮೇಲಿರಿಸಿ ದಿವಾನದ ಬಟ್ಟೆಯೆಡೆಗೆ ಕೈ ಹಾಕಿದೆ. ದಿವಾನದ ಹಾಸಿಗೆಗೆ ಇಟ್ಟಿಗೆ ಬಣ್ಣದ ದಪ್ಪಬಟ್ಟೆಯಲ್ಲಿ ನೆರಿಗೆಗಳನ್ನು ಕೂಡಿಸಿ ಮೇಲು ಹೊದಿಕೆ ಹೊಲಿಸಿದ್ದರು. ಅದೇನಾಗಿದೆಯೆಂದರೆ ಚರ್ಚಿಲ್ ಮೈಯ ಉಣ್ಣಿಗಳು ದಿವಾನದ ಬಟ್ಟೆಯ ನೆರಿಗೆಗಳೊಳಗೆ ಸೇರಿ ಅಲ್ಲಿ ದೊಡ್ಡ ಸಂಸಾರವನ್ನೇ ಹೂಡಿಬಿಟ್ಟಿದ್ದವು. ಒಂದೊಂದು ನೆರಿಗೆಯಲ್ಲಿ ಹತ್ತಿಪ್ಪತ್ತು ಉಣ್ಣಿಗಳು! ಎಷ್ಟೋ ಗಂಟೆಗಳು ನಾನು, ನನ್ನ ತಮ್ಮ ಮತ್ತು ತಾಯಿ ಕಾರ್ಯಾಚರಣೆ ನಡೆಸಿ ಸುಮಾರಷ್ಟನ್ನು ಕುಕ್ಕಿ, ಮತ್ತೆ ಕೆಲವನ್ನು ಉಸಿರು ಕಟ್ಟಿಸಿ, ಇನ್ನುಳಿದವನ್ನು ಸೋಪಿನ ನೀರಿನಲ್ಲಿ ನೆನೆಸಿದ ಆ ಬಟ್ಟೆಯನ್ನು ನಮ್ಮ ಬಲವನ್ನೆಲ್ಲ ಬಿಟ್ಟು ಉಜ್ಜಿಉಜ್ಜಿ ಸಾಯಿಸಿದೆವು.

ಅಂದು ನನ್ನ ಬಲಹೆಬ್ಬೆರಳಿಗೆ ಮೆತ್ತಿದ್ದ ರಕ್ತದ ಕಲೆಯ ಚಿತ್ರ ನೆನಪಿಗೆ ಬಂದರೆ ಈಗಲೂ ಕೈತೊಳೆಯಬೇಕೆನಿಸುತ್ತದೆ. ಶೇಕ್ಸ್ಪಿಯರನ 'ಮ್ಯಾಕ್‌ಬೆತ್' ನಾಟಕದಲ್ಲಿ, ಅಧಿಕಾರದ ಲಾಲಸೆಗೆ ಡಂಕನ್ ರಾಜನನ್ನು ಕೊಲೆ ಮಾಡಿ, ಕೈಗೆ ಅಂಟಿದ ರಕ್ತದ ಕಲೆಯನ್ನು ಅಳಿಸಲು ಹುಚ್ಚಿಯಂತೆ ತಿರುಗುವ ಲೇಡಿ ಮ್ಯಾಕ್‌ಬೆತ್ 'ಅರೇಬಿಯಾದ ಎಲ್ಲ ಸುಗಂಧದ್ರವ್ಯಗಳೂ ಈ ಪುಟ್ಟ ಕೈಯನ್ನು ತೊಳೆಯಲಾರವು' ಎಂದಂತೆ ಆಗುತ್ತದೆ ನನ್ನ ಸ್ಥಿತಿ. ಈ ಉಣ್ಣಿಸಂಹಾರದ ಪರಿಣಾಮವಾಗಿ... ಬೇಕಾದವರನ್ನು ಕಾಪಾಡುವುದೆಂದರೆ, ಬೇಡವಾದವರನ್ನು ಕೊಲ್ಲುವುದೇ? ನಾವು ಕೂಡ ಯಾರಿಗೋ ಚರ್ಚಿಲ್‌ಗಳು, ಬೇರೆ ಯಾರಿಗೋ ಉಣ್ಣಿಗಳೇ? ಅನ್ನಿಸುತ್ತದೆ.

ಆ ಉಣ್ಣಿಗಳ ಹಾಗೆ ಸಂದಿಗೊಂದಿಯಲ್ಲಿ, ಕಣ್ಣಿಗೆ ಕಾಣದಂತೆ ಅಡಗಿ ಕುಳಿತಿರುವ, ಚಿಗಟಗಳ ಹಾಗೆ ಮುಟ್ಟಿದರೆ ಮಾಯವಾಗುವ ನಮ್ಮ ಕಾಲದ ಹಲವು ಸವಾಲುಗಳನ್ನು ಕವಿಗಳು ಹಿಡಿಯುವುದು ಹೇಗೆ, ಎದುರಿಸುವುದು ಹೇಗೆ ಎಂಬ ಆಲೋಚನೆ, ಆಸೆಯ ಹಿಂದೆ ಎಷ್ಟೆಲ್ಲ ನೆನಪುಗಳು... ಮತ್ತು ಈ ಪ್ರಬಂಧ.

### ತೇಜಶ್ರೀ

ಕವಯಿತ್ರಿ, ಅನುವಾದಕಿ ತೇಜಶ್ರೀ ಹಾಸನದಲ್ಲಿ ನೆಲೆಸಿದ್ದಾರೆ. 'ಲಯ', 'ತಿಳಿಗೊಳ', 'ಉಸ್ರುಬಂಡೆ', 'ಮಾಗಿ ಕಾಲದ ಸಾಲುಗಳು', 'ಅವನರಿವಲ್ಲಿ' ಅವರ ಕವನಸಂಗ್ರಹಗಳು. ಲೇಖಕ ಯು.ಆರ್. ಅನಂತಮೂರ್ತಿ ಅವರ ಆತ್ಮಕತೆ 'ಸುರಗಿ'ಯನ್ನು ನಿರೂಪಿಸಿ, ಸಂಯೋಜಿಸಿ ಸಂಪಾದಿಸಿದ್ದಾರೆ.